# ಬಾಳೆಹಣ್ಣಿನ ಬರ್ಫಿ



ಏನೇನು ಬೇಕು?

ಬಾಳೆಹಣ್ಣು ಐದು

ಸಕ್ಕರೆ ಒಂದು ಕಪ್

ಏಲಕ್ಕಿಪುಡಿ ಸ್ವಲ್ಪ

ತುಪ್ಪ ಮೂರು ಚಮಚ.

ಮಾಡೋದು ಹೇಗೆ?

ಬಾಳೆಹಣ್ಣಿಗೆ ಸಕ್ಕರೆ ಹಾಕಿ ಸ್ಮ್ಯಾಶ್ ಮಾಡಿ ಒಂದು ಗಂಟೆ ಇಟ್ಟು ನಂತರ ತುಪ್ಪ, ಏಲಕ್ಕಿ ಪುಡಿ ಹಾಕಿ ಒಲೆಯ ಮೇಲೆ ಇಟ್ಟು ಚೆನ್ನಾಗಿ ಮಗುಚಿ ತಳಬಿಟ್ಟ ನಂತರವೂ ಎರಡು ಸುತ್ತು ಮಗುಚಿ ತುಪ್ಪ ಸವರಿದ ತಟ್ಟೆಗೆ ಸುರಿದು ಕತ್ತರಿಸಿ.



# ಕಸ್ಟರ್ಡ್ ಬರ್ಫಿ

ಏನೇನು ಬೇಕು?

ಕಸ್ಟರ್ಡ್ ಪೌಡರ್ ಮೂರು ಚಮಚ

ಸಕ್ಕರೆ ಒಂದು ಬಟ್ಟಲು

ಕಾಯಿತುರಿ ಒಂದು ಬಟ್ಟಲು

ತುಪ್ಪ ಮೂರು ಚಮಚ

ಮಾಡೋದು ಹೇಗೆ?

ಕಸ್ಟರ್ಡ್ ಪೌಡರ್, ಸಕ್ಕರೆ ಕಾಯಿತುರಿ, ತುಪ್ಪ ಎಲ್ಲವನ್ನು ಹಾಕಿ ಸ್ವಲ್ಪ ನೀರು ಹಾಕಿ ಕಲಸಿ ದಪ್ಪ ತಳದ ಪಾತ್ರೆಗೆ ಹಾಕಿ ಒಲೆಯ ಮೇಲೆ ಇಟ್ಟು ಮಗುಚಿ. ಪಾಕ ನೊರೆ ನೊರೆಯಾಗಿ ಬಂದು ತಳ ಬಿಟ್ಟ ನಂತರ ಇನ್ನೂ ಒಂದು ಸುತ್ತು ಮಗುಚಿ ತುಪ್ಪ ಸವರಿದ ತಟ್ಟೆಗೆ ಸುರಿದು ಬೇಕಾದ ಆಕಾರಕ್ಕೆ ಕತ್ತರಿಸಿ.

# ಕಾಯಿ-ಬೆಲ್ಲ ಬರ್ಫಿ



ಏನೇನು ಬೇಕು?

ತೆಂಗಿನ ತುರಿ ಎರಡು ಬಟ್ಟಲು

ಬೆಲ್ಲದ ಪುಡಿ ಒಂದು ಬಟ್ಟಲು

ಏಲಕ್ಕಿ ಪುಡಿ ಸ್ವಲ್ಪ, ತುಪ್ಪ.

ಮಾಡೋದು ಹೇಗೆ?

ಕಾಯಿತುರಿ, ಬೆಲ್ಲ, ಏಲಕ್ಕಿಪುಡಿ, ತುಪ್ಪ ಎಲ್ಲವನ್ನು ಹಾಕಿ ಸ್ವಲ್ಪ ನೀರು ಹಾಕಿ ಕಲಸಿ ದಪ್ಪ ತಳದ ಪಾತ್ರೆಯಲ್ಲಿ ಹಾಕಿ ಒಲೆಯ ಮೇಲೆ ಇಟ್ಟು ಚೆನ್ನಾಗಿ ಮಗುಚಿ. ಪಾಕ ಪಾತ್ರೆಯ ತಳ ಬಿಟ್ಟ ಮೇಲೆ ತುಪ್ಪ ಸವರಿದ ತಟ್ಟೆಯಲ್ಲಿ ಸುರಿದು ಕತ್ತರಿಸಿ.